CW-01
PW-01

**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಯಚೂರು.**

ಸ್ಪೇಷಲ್ .ಕೇಸ್(ಎಸ್.ಸಿ./ಎಸ್.ಟಿ.) ಸಂಖ್ಯೆ 280/2023

ದಿ. 01-07-2026

(ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು )

ಚಾಸಾ-01
ಫ್ರಾಸಾ-01

| | |
|---|---|
| ಸಾಕ್ಷಿದಾರರ ಹೆಸರು | ಹನುಮೇಶ್ |
| ತಂದೆಯ ಹೆಸರು | ಅಮರೇಶ್ |
| ವಯಸ್ಸು | 30 ವರ್ಷ |
| ಉದ್ಯೋಗ | ಕೂಲಿ |
| ವಾಸಸ್ಥಳ | ರಬ್ಬನಕಲ್ |

**ಮುಖ್ಯ ವಿಚಾರಣೆಃ ಸಾರ್ವಜನಿಕ ಅಭಿಯೋಜಕರಿಂದಃ-**

1. ಚಾಸಾ-2 ರಿಂದ 7 ನನ್ನ ಸಂಬಂಧಿಕರು. ಈಗ ನೋಡುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆಯಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿಲ್ಲ. ಆರೋಪಿತರು ಗೊತ್ತು. ನಾವು ಪರಿಶಿಷ್ಟ ಪಂಗಡದ ಬೇಡರ ಜಾತಿಗೆ ಸೇರಿದವರು. ಆರೋಪಿತರು ಕಬ್ಬೇರು ಜಾತಿಗೆ ಸೇರಿದವರು. ನಮಗೂ ಮತ್ತು ಆರೋಪಿತರ ನಡುವೆ ಯಾವುದೇ ಗಲಾಟೆಯಾಗಿಲ್ಲ. ಆರೋಪಿತರು ನಮಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ. ಜೀವದ ಬೆದರಿಕೆ ಹಾಕಿಲ್ಲ. ಕೈಗಳಿಂದ, ಕಟ್ಟಿಗೆಗಳಿಂದ, ಚಪ್ಪಲಿಯಿಂದ ಹೊಡೆದಿಲ್ಲ, ಮತ್ತು ಚಾಸಾ-3 ರವರಿಗೆ ಮಾನಕ್ಕೆ

CW-01
PW-01

ಕುಂದು ಉಂಟು ಮಾಡಿಲ್ಲ. ಪ್ರಕರಣದ ಬಗ್ಗೆ ನನಗೇನು ಗೊತ್ತಿಲ್ಲ. ಆರೋಪಿತರು ಜಾತಿನಿಂದನೆ ಮಾಡಿ ಬೈದಿರುವುದಿಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ ಮತ್ತು ಯಾವುದೇ ವಸ್ತುಗಳನ್ನು ಜಪ್ತಿ ಮಾಡಿಕೊಂಡಿಲ್ಲ. ನಾನು ಯಾವುದೇ ಪುರವಣಿ ಹೇಳಿಕೆಯನ್ನು ನೀಡಿಲ್ಲ. ಈಗ ನೋಡುತ್ತಿರುವ ದೂರಿನಲ್ಲಿ ನನ್ನ ಸಹಿ ಇದೆ, ಸಾಕ್ಷಿದಾರರ ಗುರುತಿಸಿದ ದೂರನ್ನು ನಿಪಿ-1 ಎಂದು ಸಾಕ್ಷಿದಾರರ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿದಾರರು ಗುರುತಿಸಿದ ಪಂಚನಾಮೆಯನ್ನು ನಿಪಿ-2 ಎಂದು ಸಾಕ್ಷಿದಾರರ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸಾಕ್ಷಿದಾರರ ಗುರುತಿಸಿದ ಪೋಟೋಗಳನ್ನು ನಿಪಿ-3 ಮತ್ತು 4 ಎಂದು ಗುರುತಿಸಲಾಯಿತು. ಸಾಕ್ಷಿದಾರರ ಪುರವಣಿ ಹೇಳಿಕೆಯನ್ನು ನಿಪಿ-5 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ವಿಶೇಷ ಅಭಿಯೋಜಕರು ಕೋರಿದ್ದಾರೆ. ಅದರಂತೆ ಸಾಕ್ಷಿಯನ್ನು ಪ್ರತಿಕೂಲ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ವಿಶೇಷ ಅಭಿಯೋಜಕರಿಗೆ ಅನುಮತಿ ನೀಡಲಾಗಿದೆ.)**

**ಪಾಟೀ ಸವಾಲುಃ ಸಾರ್ವಜನಿಕ ಅಭಿಯೋಜಕರಿಂದ**

2. ದಿಃ 10-12-2022 ರಂದು, ರಬ್ಬನಕಲ್ ಗ್ರಾಮದ ರಾಮಕ್ಕಮ್ಮ ದೇವಸ್ಥಾನದ ದುಡ್ಡನ್ನು ಲೆಕ್ಕ ಪತ್ರ ಮಾಡುವ ವಿಷಯಕ್ಕೆ ಸಂಬಂಧಿಸಿದಂತೆ ನಾವು ಮತ್ತು ಆರೋಪಿತರು ದೇವಸ್ಥಾನದ ಹತ್ತಿರ ಸೇರಿದ್ದೆವು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಮಳೆಯು ಬರುತ್ತಿರುವುದರಿಂದ ದೇವಸ್ಥಾನದ ಸುತ್ತಮುತ್ತಲೂ

CW-01
PW-01

ಕೇಸರಾಗಿದ್ದರಿಂದ ನಾವು ಮತ್ತು ಆರೋಪಿತರು ಮತ್ತು ಊರಿನ ಜನರು ದೇವಸ್ಥಾನದ ದುಡ್ಡಿನ ಲೆಕ್ಕಪತ್ರ ಮಾಡಲು ದಿಃ 11-12-2022 ರಂದು ಪುನಃ ಚಾಸಾ-2 ರವರ ಮನೆಯ ಅಂಗಳದಲ್ಲಿ ಸೇರಿದ್ದೆವು ಎಂದರೆ ಸರಿಯಲ್ಲ. ಬೆಳಿಗ್ಗೆ 10-30 ರ ಸಮಯದಲ್ಲಿ ಆರೋಪಿತರು ದೇವಸ್ಥಾನದ ಲೆಕ್ಕಪತ್ರ ಮಾಡಲು ನೀವೇಕೆ ಇಲ್ಲಿ ಬಂದಿರುತ್ತೀರಿ ಸೂಳೆಮಕ್ಕಳೇ ಎಂದು ನಮ್ಮಂದಿಗೆ ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆಂದರೆ ಸರಿಯಲ್ಲ, ಆಗ 1 ನೇ ಆರೋಪಿ ಚಾಸಾ-2 ರವರ ತಲೆಗೆ ರಾಡಿನಿಂದ ಹೊಡೆದಿರುತ್ತಾನೆ ಎಂದರೆ ಸರಿಯಲ್ಲ. 2 ನೇ ಆರೋಪಿ ಚಾಸಾ-2 ರವರಿಗೆ ಕಟ್ಟಿಗೆಯಿಂದ ಹೊಟ್ಟೆಗೆ ಕೈ ಕಾಲಿಗೆ ಹೊಡೆದಿರುತ್ತಾರೆ ಎಂದರೆ ಸರಿಯಲ್ಲ, 1 ನೇ ಆರೋಪಿ ಚಾಸಾ-3 ರವರ ಸೀರೆ ಹಿಡಿದು ಎಳೆದಾಡಿ ಬ್ಯಾಡರ ಸೂಳೆ ಎಂದು ಜಾತಿನಿಂದನೆ ಮಾಡಿ ಕಂಬಕ್ಕೆ ಕಟ್ಟಿ ಹಾಕಿ ಹೊಡೆಯಿರಿ ಎಂದು ಪ್ರಚೋದಿಸಿರುತ್ತಾರೆಂದರೆ ಸರಿಯಲ್ಲ. ಚಾಸಾ-3 ರವರ 2 ನೇ ಆರೋಪಿ ಎದೆಗೆ ಒದ್ದು, ಕುಪ್ಪಸವನ್ನು ಹಿಡಿದು ಎಳೆದಾಡಿ ಮಾನಕ್ಕೆ ಕುಂದು ಉಂಟು ಮಾಡಿರುತ್ತಾರೆಂದರೆ ಸರಿಯಲ್ಲ. ಆರೋಪಿತರೆಲ್ಲರೂ ಚಾಸಾ-2 ಮತ್ತು 3 ರವರ ಕುತ್ತಿಗೆಯ ಮೇಲೆ ಕಾಲಿಟ್ಟು ಹೊಡೆದಿರುತ್ತಾರೆಂದರೆ ಸರಿಯಲ್ಲ. ಬಿಡಿಸಲು ಹೊದ ನನಗೆ ಆರೋಪಿ ನಂ.2 ಕಟ್ಟೆಗೆಯಿಂದ ತಲೆಗೆ ಮತ್ತು ಮುಖಕ್ಕೆ ಹೊಡೆದಿರುತ್ತಾರೆಂದರೆ ಸರಿಯಲ್ಲ. 1 ನೇ ಆರೋಪಿ ನನಗೆ ಬ್ಯಾಡರ ಸೂಳೆಮಗನೇ ಬಿಡಿಸಲು ಬಂದಾನ ಎಂದು ಜಾತಿನಿಂದನೆ ಮಾಡಿ ಅವಾಚ್ಯ ಶಬ್ದಗಳಿಂದ ಕೈ ಮತ್ತು ಕಾಲುಗಳಿಂದ ಹೊಡೆದಿರುತ್ತಾನೆ ಎಂದರೆ ಸರಿಯಲ್ಲ. 3 ನೇ ಆರೋಪಿ ಚಾಸಾ-3 ರವರಿಗೆ ಎಡಗಾಲಿನ ಚಪ್ಪಲಿಂದ ಚಪ್ಪಲಿಗೆ ಬುಜಕ್ಕೆ

CW-01
PW-01

ಹೊಡೆದಿರುತ್ತಾನೆ ಮತ್ತು ಆಕೆಯ ಕೂದಲು ಹಿಡಿದು ಎಳೆದಾಡಿರುತ್ತಾನೆಂದರೆ ಸರಿಯಲ್ಲ. ಆರೋಪಿತರೆಲ್ಲರೂ ನಮ್ಮನ್ನು ಜೀವಸಹಿತ ಬಿಡುವುದಿಲ್ಲ ಕೊಂದು ಹಾಕುತ್ತೇವೆಂದು ಜೀವದ ಬೆದರಿಕೆ ಹಾಕಿರುತ್ತಾರೆಂದರೆ ಸರಿಯಲ್ಲ.

3. ನಾನು ಸ್ಥಳ ತೋರಿಸಿದ ಮೇರೆಗೆ ದಿಃ 12-12-2022 ರಂದು ಮಧ್ಯಾಹ್ನ 3 ರಿಂದ 4 ಗಂಟೆ ಸಮಯದಲ್ಲಿ ಸ್ಥಳ ಪಂಚನಾಮೆಯನ್ನು ಚಾಸಾ-8 ಮತ್ತು 9 ರವರ ಸಮಕ್ಷಮ ಮಾಡಿ ಪಂಚನಾಮೆಯಲ್ಲಿ ಕಾಣಿಸಿದ ಕಬ್ಬಿಣದ ರಾಡು, ಕಟ್ಟಿಗೆ ಮತ್ತು ಚಪ್ಪಲಿಯನ್ನು ಜಪ್ತಿ ಮಾಡಿಕೊಂಡಿರುತ್ತಾರೆಂದರೆ ಸರಿಯಲ್ಲ. ಅದೇ ಸಮಯದಲ್ಲಿ ನಿಪಿ-3 ಮತ್ತು 4 ರಂತೆ ಫೋಟೋಗಳನ್ನು ತೆಗೆಸಿದಿದ್ದರು ಎಂದರೆ ಸರಿಯಲ್ಲ.

4. ನಿಪಿ-1 ರಂತೆ ದೂರನ್ನು 5 ರಂತೆ ಪುರವಣಿ ಹೇಳಿಕೆಯನ್ನು ನೀಡಿದ್ದರೂ ಸಹಿತ ಆರೋಪಿತರೊಂದಿಗೆ ರಾಜೀ ಮಾಡಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲು ಶ್ರೀ ಆರ್.ಪಿ.ಎನ್. ವಕೀಲರಿಂದ ಆರೋಪಿ ಪರಃ**

ಏನೂ ಇಲ್ಲ ತಿಳಿಸಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.

(ಮಾಲ ಎನ್.ಡಿ.)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ರಾಯಚೂರು.